೫) ಹಾಗಿದ್ದಲ್ಲಿ ಇದನ್ನು ಯಾವಾಗ ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲಾಗುವುದು:

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಹೌದು

ಆ) ಸಧ್ಯಕ್ಕೆ ಇಲ್ಲ

ಇ) ಉದ್ಭವಿಸುವುದಿಲ್ಲ.

ಕೆ ಹೆಚ್ ಬಿ ಕಾಲೋನಿ ಮನೆಗಳಿಗೆ ಕ್ರಯ ನಿಷ್ಕರ್ಷೆ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ಅಗ್ರಹಾರ ದಾಸರಹಳ್ಳಿಯಲ್ಲಿ ಗೃಹ ಮಂಡಳಿಯವರು ಯಾವ ಯಾವ ವರ್ಗದವರಿಗೆ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿದ್ದಾರೆ ?

ಆ) ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ಕಟ್ಟಿಸಿ ಕೊಟ್ಟಾಗ ಅವರು ಮನೆ ಕ್ರಯಕ್ಕಾಗಿ ಕೊಡಬೇಕೆಂದು ತಮ್ಮ ಕರಾರು ಪತ್ರದಲ್ಲಿ ನಮೂದಿಸಿದ ಮೊತ್ತವೆಷ್ಟು ?

ಇ) ಇದನ್ನು ಪುನಃ ಪುನಃ ಬದಲಾಯಿಸಿ ಕ್ರಯದ ಮೊತ್ತಗಳನ್ನು ಹೆಚ್ಚಿಸುತ್ತಿರುವುದು ನಿಜವೇ ಹಾಗಿದ್ದಲ್ಲಿ ಹೆಚ್ಚಳವಾಗಿ ನಮೂದಿಸಿರುವ ಮೊತ್ತವೆಷ್ಟು ?

ಈ) ಇದೇ ರೀತಿ ಎಂ. ಐ. ಜಿ. ಮತ್ತು ಹೆಚ್ ಐ ಜಿ ಮನೆಗಳಿಗೂ ಅವುಗಳ ಕ್ರಯವನ್ನು ಹೆಚ್ಚಾಗಿಸಿದ್ದೀರಾ ? ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು (ಮನೆ ಕೊಟ್ಟಾಗ ಪತ್ರದಲ್ಲಿ ನಮೂದಿಸಿರುವ ಕ್ರಯದ ಮೊತ್ತ ನಂತರ ಬದಲಾಯಿಸಿದ ಮೊಬಲಗು)

ಶ್ರೀ ಮಹಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ಕಳೆದ ಮೂರು ವರ್ಷಗಳಲ್ಲಿ ಅಗ್ರಹಾರ ದಾಸರಹಳ್ಳಿಯಲ್ಲಿ ಎಂಧ್ಯಮ ಆದಾಯ ವರ್ಗದವರಿಗಾಗಿ ೨೦ ಮನೆಗಳನ್ನು ಕಟ್ಟಲಾಗಿದೆ.

ಆ) ಆರ್ಥಿಕ ಹಿಂದುಳಿದ ವರ್ಗದ ಮನೆಗಳ ಕರಾರು ಪತ್ರದಲ್ಲಿ ನಮೂದಿಸಿದ ಮೊತ್ತವು ಹೀಗಿದೆ

೧ನೇ ಹಂತ ರೂ. ೨೪,೮೬೫–೦೦

೨ನೇ ಹಂತ ರೂ. ೧೧,೩೬೨–೦೦

ಇ) ಕರಾರು ಪತ್ರದಲ್ಲಿ ಸೂಚಿಸಿದ್ದ ಮನೆಯ ಬೆಲೆಯನ್ನು ಕೇವಲ ಒಂದು ಬಾರಿ ಮಾತ್ರ ಬದಲಾಯಿಸಲಾಗಿದೆ. ಈ ರೀತಿ ಬದಲಾವಣೆಯಾದ ಬೆಲೆ ಆರ್ಥಿಕ ಹಿಂದುಳಿದ ವರ್ಗದ ಮನೆ ೧ನೇ ಹಂತಕ್ಕೆ ರೂ. ೧೧,೫೯೩ ಮತ್ತು ೨ನೇ ಹಂತಕ್ಕೆ ರೂ. ೧೦, ೦೫೭ ಹೆಚ್ಚಿಗೆ ಮಾಡಲಾಗಿದೆ.

ಈ) ಹೌದು

	ತಾತ್ಕಾಲಿಕ ಬೆಲೆ ರೂ. ಗಳಲ್ಲಿ	ಅಂತಿಮ ಬೆಲೆ ರೂ. ಗಳಲ್ಲಿ
ಎಂಐಜಿ ೧ನೇ ಹಂತ	೮೨,೦೨೮–೦೦	೧,೦೭,೬೪೧.೦೦
ಎಂಐಜಿ. ೨ನೇ ಹಂತ	೫೮,೨೮೫–೦೦	೯೫,೯೭೦–೦
ಹೆಚ್ಐಜಿ	೧,೪೯ ೩೬೭-೦೦	೧,೮೯,೨೭೧ ೦೦೦